# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ-182 ಪದ್ಮನಾಭನಗರ, ಬೆಂಗಳೂರು

ಸಂ: ಸ.ಅ/ವಾ-182/ಪಿ.ಆರ್/05/2020-21 ದಿನಾಂಕ : 05-12-2020

## ವಾರ್ಡ್ ಸಮಿತಿಯ ಸಭೆಯ ನಡವಳಿಗಳು

**ವಿಷಯ-** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ :ಬಿ12(58)ಪಿಆರ್/35/2020-21 ದಿನಾಂಕ :21-09-2020 ರವರ ಆದೇಶದಂತೆ ದಿನಾಂಕ :05-12-2020 ರಂದು ವಾರ್ಡ್ ಸಂಖ್ಯೆ-182 ಪದ್ಮನಾಭನಗರದ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

## ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು.

1) ಶ್ರೀ ನರಸಿಂಹಮೂರ್ತಿ ಜಂಟಿ ಆಯುಕ್ತರು ದಾಸರಹಳ್ಳಿ, ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿ.

2) ಶ್ರೀ ಶಿವಶಂಕರ್, ಸಹಾಯಕ ಅಭಿಯಂತರರು, ಬೆಸ್ಕಾಂ ಎಸ್-9 ಉಪ ವಿಭಾಗ.

3) ಶ್ರೀ ಶಂಕರ್ ಬಹದ್ದೂರ್ ಸಿಂಗ್, ಕಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ.

4) ಶ್ರೀ ಹರೀಶ್, ಉಪ ವಲಯ ಅರಣ್ಯಾಧಿಕಾರಿಗಳು, ಬಿ.ಬಿ.ಎಂ.ಪಿ.

5) ಶ್ರೀಮತಿ ಐಶ್ವರ್ಯ.ಬಿ.ಎ, ಸಹಾಯಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ.

6) ಶ್ರೀ ಉಮೇಶ್, ಸಹಾಯಕ ಅಭಿಯಂತರರು, ಬಿ.ಬಿ.ಎಂ.ಪಿ ವಿದ್ಯುತ್ ಉಪ ವಿಭಾಗ (ದಕ್ಷಿಣ).

ವಾರ್ಡ್ ಸಮಿತಿ ಸಂಚಾಲಕರು ಮತ್ತು ಸಹಾಯಕ ಅಭಿಯಂತರರು ಪದ್ಮನಾಭನಗರ ಬಡಾವಣೆ ವಾರ್ಡ್ ಸಂಖ್ಯೆ-182 ರವರಾದ ಶ್ರೀ ರಾಘವೇಂದ್ರ.ಟಿ ರವರು ಪ್ರಾರಂಭದಲ್ಲಿ ಉಪಸ್ಥಿತರಿದ್ದ ನೋಡೆಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರ.ಸಂಖ್ಯೆ | ವಿಷಯ | ಷರಾ |
|---|---|---|
| 1 | ಗೌಡನಪಾಳ್ಯ ಮುಖ್ಯರಸ್ತೆ ಹಾಗೂ ಇತರೆ ರಸ್ತೆಗಳು ರಸ್ತೆ ಗುಂಡಿಗಳಿಂದ ಕೂಡಿದ್ದು, ಅವುಗಳನ್ನು ಕೂಡಲೇ ಮುಚ್ಚಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ವಾರ್ಡ್ ಸಮಿತಿಯ ಸದಸ್ಯರುಗಳು ಕೋರಿದರು. | ಸದರಿ ಕಾಂಕ್ರೀಟ್ ರಸ್ತೆಗಳ ಅಭಿವೃದ್ಧಿಗಾಗಿ ರೂ 60.00 ಲಕ್ಷ ಅನುದಾನವನ್ನು ಮೀಸಲಿಡಲಾಗಿದ್ದು, ಸದರಿ ಕಡತವು ಮಾನ್ಯ ಆಯುಕ್ತರ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಲಾಗಿದೆ.<br>ಉಳಿದಂತೆ ಗೌಡನಪಾಳ್ಯ ಮುಖ್ಯರಸ್ತೆಗೆ ಸಂಬಂಧಿಸಿದಂತೆ ಸದರಿ ರಸ್ತೆ ಅಭಿವೃದ್ಧಿಯನ್ನು ರೂ.94.00 ಅನುದಾನಕ್ಕೆ ಟೆಂಡರ್ ಕರೆದು ಕಾರ್ಯಾದೇಶ ನೀಡುವ ಹಂತದಲ್ಲಿರುತ್ತದೆಂದು ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದರು. |
| 2 | ಕುಮಾರಸ್ವಾಮಿ ಬಡಾವಣೆಯ 15 ಎಫ್ ಬಸ್ ನಿಲ್ದಾಣದ ಬಳಿ ಇರುವ 2ನೇ ಹಾಗೂ 3ನೇ ಅಡ್ಡರಸ್ತೆಗಳು ಹಾಳಾಗಿದ್ದು, ಸಧ್ಯಕೆ ರಸ್ತೆಗುಂಡಿಗಳನ್ನು ಮುಚ್ಚಿದ್ದರೂ ಸಹ ರಸ್ತೆಗಳನ್ನು ಪೂರ್ಣ ಪ್ರಮಾಣದಲ್ಲಿ ಡಾಂಬರೀಕರಣ ಮಾಡಬೇಕೆಂದು ವಾರ್ಡ್ ಸಮಿತಿಯ ಸದಸ್ಯರುಗಳು ಕೋರಿದರು. | ಸದರಿ ರಸ್ತೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ರೂ.75.00 ಲಕ್ಷಗಳಿಗೆ ಅನುದಾನ ಮೀಸಲಿರಿಸಲಾಗಿದ್ದು, ಸದರಿ ಕಡತವು ಟೆಂಡರ್ ಹಂತದಲ್ಲಿದ್ದು, 1 ತಿಂಗಳ ಅವಧಿಯಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳುವುದೆಂದು ಸಹಾಯಕ ಅಭಿಯಂತರರು ವಾರ್ಡ್ ಸಮಿತಿ ಸಭೆಗೆ ತಿಳಿಸಿದರು. |

Scanned by CamScanner